# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 98 (03) |
| ಸದಸ್ಯರ ಹೆಸರು | : | ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನಹೊಂದಿದವರು) |
| ಉತ್ತರಿಸುವ ದಿನಾಂಕ | : | 13.02.2023 |
| ಉತ್ತರಿಸುವ ಸಚಿವರು | : | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರಗಳು |
|---|---|---|
| ಅ) | ಆಯುಷ್ ಆಸ್ಪತ್ರೆಗಳಲ್ಲಿ ತಾತ್ಕಾಲಿಕ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಜ್ಞ ವೈದ್ಯರುಗಳ ಸೇವೆಯ ಬಗ್ಗೆ ಸಾರ್ವಜನಿಕರಿಂದ ಸರ್ಕಾರಕ್ಕೆ ಸಲ್ಲಿಕೆಯಾಗಿರುವ ಅಭಿಪ್ರಾಯವೇನು; | ಆಯುಷ್ ಆಸ್ಪತ್ರೆಗಳಲ್ಲಿ ತಾತ್ಕಾಲಿಕ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಜ್ಞ ವೈದ್ಯರುಗಳ ಸೇವೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಅಭಿಪ್ರಾಯ ಇಲಾಖೆಯಲ್ಲಿ ಸ್ವೀಕೃತವಾಗಿರುವುದಿಲ್ಲ. |
| ಆ) | ಸಾರ್ವಜನಿಕರಿಂದ ತೃಪ್ತಿಕರವಾದ ವರದಿ ಬಂದಿದ್ದಲ್ಲಿ; ಸರ್ಕಾರವು ಖಾಯಂ ಹುದ್ದೆಗಳನ್ನು ಸೃಜನೆ ಮಾಡಿ ತಜ್ಞ ವೈದ್ಯರುಗಳನ್ನು ಖಾಯಂ ಆಗಿ ನೇಮಕ ಮಾಡಿಕೊಳ್ಳಲು ಸಾಧ್ಯವಾಗದಿರಲು ಕಾರಣವೇನು; | ಕೇಂದ್ರ ಪುರಸ್ಕೃತ ಯೋಜನೆಯಾದ ನ್ಯಾಮ್ ಯೋಜನೆಯು ತಾತ್ಕಾಲಿಕ ಯೋಜನೆಯಾಗಿದ್ದು, ಸದರಿ ಯೋಜನೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ತಜ್ಞ ವೈದ್ಯರುಗಳನ್ನು ಸರ್ಕಾರಿ ಸೇವೆಯಲ್ಲಿ ಖಾಯಂಗೊಳಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ತಜ್ಞ ವೈದ್ಯರುಗಳ ಹುದ್ದೆಯು ಸಂಪೂರ್ಣವಾಗಿ ತಾತ್ಕಾಲಿಕ ಹುದ್ದೆಯಾಗಿರುತ್ತವೆ. ರಾಷ್ಟ್ರೀಯ ಆಯುಷ್ ಅಭಿಯಾನ ಯೋಜನೆಯು ಅಸ್ತಿತ್ವದಲ್ಲಿರುವವರೆಗೂ ಮಾತ್ರ ಈ ಹುದ್ದೆಗಳು ಚಾಲ್ತಿಯಲ್ಲಿರುತ್ತದೆ.<br><br>ಸದರಿ ವೈದ್ಯರುಗಳನ್ನು ಸರ್ಕಾರಿ ಸೇವೆಯಲ್ಲಿ ಖಾಯಂಗೊಳಿಸಲು ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ. |
| ಇ) | ಕಳೆದ 10 ವರ್ಷಗಳಿಂದ ಸರ್ಕಾರಿ ತಾಲ್ಲೂಕು ಮತ್ತು ಜಿಲ್ಲಾ ಆಯುಷ್ ಆಸ್ಪತ್ರೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಜ್ಞ ವೈದ್ಯರು, ಅರೆ ವೈದ್ಯಕೀಯ ಮತ್ತು ಇತ್ಯಾದಿ ಹುದ್ದೆಗಳನ್ನು ಸರ್ಕಾರವು ಯಾವ ಕಾಲಮಿತಿಯಲ್ಲಿ ಖಾಯಂಗೊಳಿಸಲು ಉದ್ದೇಶಿಸಿದೆ; | |

| | | |
|---|---|---|
| ಈ) | ಆಯುಷ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ದರ್ಜೆಯ ವೈದ್ಯಾಧಿಕಾರಿಗಳ ಮತ್ತು ತಜ್ಞ ವೈದ್ಯರುಗಳ ನಡುವೆ ಇರುವ ವ್ಯತ್ಯಾಸಗಳೇನು; | ಆಯುಷ್ ಇಲಾಖೆಯಲ್ಲಿ **ವೈದ್ಯಾಧಿಕಾರಿಗಳು** (ಆಯುರ್ವೇದ/ಯುನಾನಿ/ ಹೋಮಿಯೋಪಥಿ/ ಪ್ರಕೃತಿ ಚಿಕಿತ್ಸೆ &ಯೋಗ) ಎಂಬ ಪದನಾಮದಲ್ಲಿ ಖಾಯಂ ಹುದ್ದೆಗಳು ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಸೃಜನೆಯಾಗಿರುತ್ತದೆ.<br><br>ತಜ್ಞ ವೈದ್ಯರುಗಳು ಕೇಂದ್ರ ಪುರಸ್ಕೃತ ಯೋಜನೆಯಾದ ರಾಷ್ಟ್ರೀಯ ಆಯುಷ್ ಅಭಿಯಾನ ಯೋಜನೆಯಡಿ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುತ್ತಾರೆ. |
| ಉ) | ಸದರಿ ಎರಡು ಹುದ್ದೆಗಳ ಕರ್ತವ್ಯ ಕಾರ್ಯ ವ್ಯಾಪ್ತಿ ಎಷ್ಟು; ಜವಾಬ್ದಾರಿಗಳು ಯಾವುವು; | ಆಯುಷ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ದರ್ಜೆಯ **ಖಾಯಂ ವೈದ್ಯಾಧಿಕಾರಿಗಳ** ಕರ್ತವ್ಯ, ಕಾರ್ಯವ್ಯಾಪ್ತಿ ಹಾಗೂ ಜವಾಬ್ದಾರಿಗಳು ಈ ಕೆಳಕಂಡಂತಿದೆ.<br>• ಹೊರರೋಗಿ/ಒಳರೋಗಿಗಳ ತಪಾಸಣೆ ಮತ್ತು ಚಿಕಿತ್ಸೆ ನೀಡುವುದು<br>• ಆಸ್ಪತ್ರೆ/ಚಿಕಿತ್ಸಾಲಯಗಳ ದಾಖಲೆಗಳು, ಪತ್ರಗಳು, ಕಡತಗಳ ನಿರ್ವಹಣೆ ಮಾಡುವುದು.<br>• ಸಾರ್ವಜನಿಕರಿಗೆ/ರೋಗಿಗಳಿಗೆ ಆಯುಷ್ ಚಿಕಿತ್ಸಾ ಪದ್ಧತಿಯಲ್ಲಿ ತಪಾಸಣೆ ನಡೆಸಿ ಚಿಕಿತ್ಸೆ ನೀಡುವುದು.<br>• ಸಾರ್ವಜನಿಕರಿಗೆ/ ರೋಗಿಗಳಿಗೆ ಆಯುಷ್ ಪದ್ಧತಿ ಬಗ್ಗೆ ಆಗ್ಗಿಂದಾಗೆ ಜಾಗೃತಿ/ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸುವುದು.<br>• ಆಸ್ಪತ್ರೆ/ಚಿಕಿತ್ಸಾಲಯಗಳಿಗೆ ಅಗತ್ಯವಿರುವ ಸಾಧನ, ಸಲಕರಣೆಗಳು, ಪೀಠೋಪಕರಣಗಳು, ಔಷಧಿಗಳು, ಅಗತ್ಯ ವಸ್ತುಗಳ ಖರೀದಿಯನ್ನು ನಿಯಮಾನುಸಾರ ಕ್ರಮವಹಿಸಿ ಮೇಲಾಧಿಕಾರಿಗಳಿಗೆ ಮೇಲು ಸಹಿಗಾಗಿಸಲ್ಲಿಸುವುದು.<br>• ಆಸ್ಪತ್ರೆ/ಚಿಕಿತ್ಸಾಲಯಗಳಲ್ಲಿ ಔಷಧ ದಾಸ್ತಾನು, ಪೀಠೋಪಕರಣ, ಅಂಚೆ ಚೀಟಿ, ವೇತನ ಬಟವಾಡೆ, ನಗದು ಪುಸ್ತಕ ಅನುಪಯುಕ್ತಗಳ ವಹಿ, ಕಛೇರಿ ಆಸ್ತಿ ವಹಿ, ಸಾದಿಲ್ವಾರು ಪುಸ್ತಕ, ಪ್ರಯಾಣ ಭತ್ಯೆ ಪುಸ್ತಕ, ಅನುದಾನ ವಹಿ, ಸಾಮಾನ್ಯ ರಶೀದಿ ಪುಸ್ತಕ, ರೆಮಿಟೆನ್ಸ್ ವಹಿ, ಕಟಾವಣೆ ವಹಿ ನಿರ್ವಹಿಸುವುದು.<br>• SCSP/TSP ಕಾರ್ಯಕ್ರಮಗಳು ಮತ್ತು ಇತರೆ ಆಯುಷ್ ಆರೋಗ್ಯ ಕಾರ್ಯಕ್ರಮಗಳನ್ನು ಮಾರ್ಗಸೂಚಿ ಅನ್ವಯ ಆಯೋಜನೆ ಮಾಡುವುದು.<br>• ಆಸ್ಪತ್ರೆ/ ಚಿಕಿತ್ಸಾಲಯಗಳ ಸಂಪೂರ್ಣ ಆಡಳಿತ ನಿರ್ವಹಣೆ ಸಿಬ್ಬಂದಿ ಕುಂದುಕೊರತೆ ನಿವಾರಣೆ.<br>• ಅವಶ್ಯಕವಿರುವ ರೋಗಿಗಳಿಗೆ Sickness and fitness Certificate ನೀಡುವುದು, ವೈದ್ಯಕೀಯ ದೃಢೀಕರಣ ಪ್ರಮಾಣ ಪತ್ರ ನೀಡುವುದು.<br>• ವಯಸ್ಸು ದೃಢೀಕರಣ ಪತ್ರ ನೀಡುವುದು .<br>• ನಿಯತಕಾಲಿಕ ಅಂಗನವಾಡಿ, ಶಾಲಾ ಮಕ್ಕಳ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ. |

| | | |
|---|---|---|
| | | ರಾಷ್ಟ್ರೀಯ ಕಾರ್ಯಕ್ರಮಗಳನ್ನು ಮಾರ್ಗಸೂಚಿಯಂತೆ ನಡೆಸುವುದು.<br><br>ಕೇಂದ್ರ ಪುರಸ್ಕೃತ ಯೋಜನೆಯಾದ ರಾಷ್ಟ್ರೀಯ ಆಯುಷ್ ಅಭಿಯಾನ ಯೋಜನೆಯಡಿ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ತಜ್ಞ ವೈದ್ಯರುಗಳು ತಜ್ಞತೆ ಹೊಂದಿರುವ ವಿಷಯದಲ್ಲಿ ಚಿಕಿತ್ಸೆ ನೀಡುವುದರ ಜೊತೆಗೆ ಒಳ ಹಾಗೂ ಹೊರರೋಗಿಗಳಿಗೆ ಚಿಕಿತ್ಸೆ ನೀಡುತ್ತಾರೆ ಹಾಗೂ ಮೇಲಾಧಿಕಾರಿಗಳಿಂದ ಸೂಚಿಸಲ್ಪಡುವ ಇತರೆ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. |
| ಊ) | ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುವ ಆಯುಷ್ ತಜ್ಞ ವೈದ್ಯರುಗಳ ವಯೋಮಿತಿ ಮೀರುತ್ತಿದ್ದು, ಇವರುಗಳ ಕುಟುಂಬಕ್ಕೆ ಭದ್ರತೆ ನೀಡುವ ಹಿತದೃಷ್ಟಿಯಿಂದ ಸದರಿ ವೈದ್ಯರುಗಳ ಸೇವೆಯನ್ನು ಖಾಯಂಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? | ರಾಷ್ಟ್ರೀಯ ಆಯುಷ್ ಅಭಿಯಾನ ಯೋಜನೆಯು ಕೇಂದ್ರ ಪುರಸ್ಕೃತ ತಾತ್ಕಾಲಿಕ ಯೋಜನೆಯಾಗಿದ್ದು, ಈ ಯೋಜನೆಯಡಿ ಸೃಜಿಸಲಾದ ತಜ್ಞ ವೈದ್ಯರುಗಳ ಹುದ್ದೆಗಳು ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು, ಈ ಹುದ್ದೆಗಳು ಯೋಜನೆಯು ಚಾಲ್ತಿಯಲ್ಲಿರುವವರೆಗೆ ಮಾತ್ರ ಇರುತ್ತವೆ. ಆದ್ದರಿಂದ ಸದರಿ ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಜ್ಞ ವೈದ್ಯರುಗಳ ಸೇವೆಯನ್ನು ಖಾಯಂಗೊಳಿಸಲು ನಿಯಮಾವಳಿಗಳಲ್ಲಿ ಅವಕಾಶವಿರುವುದಿಲ್ಲ. |

**ಸಂಖ್ಯೆ: ಆಕುಕ 57 ಪಿಐಎಂ 2023**

**(ಡಾ|| ಕೆ.ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು